



ಅರುಣ ಪಿ. ಭಟ್ಟ

## ವಾರಭವಿಷ್ಯ: 23.03.2023ರಿಂಧ 29.03.2023ರವರೆಗೆ




ಅನಿರೀಕ್ಷಿತ ವಿವಾಹ ಪ್ರಸ್ತಾವ ಬರುವುದು. ಮನೆಯಲ್ಲಿನ ಆರ್ಥಿಕ ಸಂಕಷ್ಟ ಬಗೆಹರಿಯುವುದು. ಕಲಾವಿದರಿಗೆ ಉತ್ತಮ ಲಾಭ ಸಿಗಬಹುದು. ನೌಕರಿಯಲ್ಲಿ ಪ್ರಮೋಷನ್ ಬರಲಿದೆ. ವಿದ್ಯಾರ್ಥಿಗಳಿಗೆ ಉಚ್ಚ ಶಿಕ್ಷಣ ಭಾಗ್ಯ. ಆದರೆ ಕೌಟುಂಬಿಕ ಜವಾಬ್ದಾರಿಯಲ್ಲಿ ಹಿನ್ನಡೆ. ಮೂತ್ರಜನಕಾಂಗ ಪೀಡೆ. ಶುಭದಿನ 25. ಶ್ರೀಕೃಷ್ಣ ಪೂಜೆ, ಉಪವಾಸ ಮಾಡಿರಿ. ತುಲಸಿ ಅರ್ಚನೆ ಮಾಡಿರಿ.




ಪ್ರಾರಂಭದ ಎರಡು ದಿನಗಳಲ್ಲಿ ಬಂಧುಗಳಿಂದ ಸುವಾರ್ತೆ ಸಿಗಲಿದೆ. ಗೃಹ ನಿರ್ಮಾಣದ ವಿಷಯದಲ್ಲಿ ನಿಮ್ಮ ಯೋಜನೆಗೆ ಸಂಬಂಧಿಸಿದ ಕೆಲಸಗಳಲ್ಲಿ ಅನಿರೀಕ್ಷಿತ ಪ್ರಗತಿ ಕಾಣಲಿದೆ. ನಿರುದ್ಯೋಗಿಗಳಿಗೆ ಸರಕಾರಿ ಉದ್ಯೋಗ ದೊರೆಯುವ ಸಾಧ್ಯತೆ ಇದೆ. ಪಿತ್ತಪೀಡೆಯಿಂದ ಕಿರಿಕಿರಿ ಆಗುತ್ತದೆ. ಧನಲಾಭ. ಮಿತ್ರರಿಂದ ಅಸಂತೋಷ. ಶುಭದಿನ 26. ಕಾಲ ಭೈರವಾಷ್ಟಕ ಪಠಣ ಮಾಡಿರಿ.




ಬಹುದಿನಗಳ ಗೃಹ ಕಲಹಕ್ಕೆ ಮುಕ್ತಿ ದೊರೆಯುವುದು. ಸ್ಪರ್ಧಾತ್ಮಕ ಪರೀಕ್ಷೆ ಅಭ್ಯರ್ಥಿಗಳಿಗೆ ಉತ್ತಮ ಯಶಸ್ಸು ಸಿಗಲಿದೆ. ಸರಕಾರಿ ನೌಕರರಿಗೆ ಪದೋನ್ನತಿ ಸಿಗಲಿದ್ದು ಸಂತೋಷವನ್ನು ಕಾಣುತ್ತೀರಿ. ಐಚ್ಛಿಕ ಸ್ಥಳಕ್ಕೆ ಬದಲಾವಣೆ. ವಾರಾಂತ್ಯದಲ್ಲಿ ಆಪ್ತರಿಂದ ಸನ್ಮಾನ. ಅನಿರೀಕ್ಷಿತ ಚಿಕ್ಕ ಪ್ರವಾಸ ಕೈಗೊಳ್ಳುತ್ತೀರಿ. ಕಾಗದ ಪತ್ರಗಳ ಕೆಲಸ. ಶುಭದಿನ 25. ನವನಾಗ ನಾಮ ಸ್ತೋತ್ರ ಮಾಡಿರಿ.




ಸ್ವತಂತ್ರ ಉದ್ಯೋಗಸ್ಥರಿಗೆ ನಿರೀಕ್ಷೆಗಿಂತ ಹೆಚ್ಚಿನ ಲಾಭ ಸಿಗಲಿದೆ. ವಿದ್ಯುತ್ ಗುತ್ತಿಗೆದಾರರಿಗೆ ಜನರಿಂದ ಪ್ರಶಂಸೆ ಉಂಟಾಗುತ್ತದೆ. ಪರ ಊರಿನ ಪ್ರವಾಸದಲ್ಲಿ ಜ್ವರ ಪೀಡೆ ಕಾಣಿಸೀತು ಎಚ್ಚರ ವಹಿಸಿ. ಮಕ್ಕಳು ನಿಮ್ಮ ಬಗ್ಗೆ ಮುನಿಸಿಕೊಳ್ಳುತ್ತಾರೆ. ಶತ್ರುಗಳ ಕಾಟ ನಡೆಯೋದಿಲ್ಲ. ಮನೆಗೆ ಅಪರೂಪದ ಅತಿಥಿಗಳ ಆಗಮನ. ಆರೋಗ್ಯ ಭಾಗ್ಯ. ಶುಭದಿನ 28. ಪುಷ್ಯರಾಗ ಹರಳು ಧಾರಣೆ ಮಾಡಿರಿ. ದತ್ತಾತ್ರೇಯ ಸ್ತುತಿ ಮಾಡಿರಿ.




ನೆನಗುದಿಗೆ ಬಿದ್ದ ಕೆಲಸಗಳು ಕೊನೆಯ ಹಂತ ತಲುಪುತ್ತವೆ. ಹೊಸ ನಿವೇಶನ ಖರೀದಿ ಮಾಡಲು ಇದು ಸಕಾಲ. ಆದರೆ ಮನೆ ಬದಲಾಯಿಸಿದರೆ ತೊಂದರೆ ಉಂಟಾಗಬಹುದು. ನಿರೀಕ್ಷಿತವಾದ ಜನರಿಂದ ಸನ್ಮಾನ ನಿಮ್ಮ ಪಾಲಿಗೆ ಬರಲಿದೆ. ಸಂಕಟದ ಮಧ್ಯೆ ಮಿಂಚುವಿರಿ. ಹೊಸವಸ್ತು ಖರೀದಿ ಪ್ರಕ್ರಿಯೆ. ಉದರ ದೋಷ. ಶುಭದಿನ 29. ದಶರಥ ವಿರಚಿತ ಶನಿ ಸ್ತೋತ್ರ ಮಾಡಿರಿ.




ಉತ್ತಮವಾದ ವ್ಯವಸ್ಥೆಯಲ್ಲಿ ಇದ್ದಂತೆ ಅನ್ನಿಸಿದರೂ, ನಿಮ್ಮ ಆ ಭಾವನೆ ಒಂದೊಂದಾಗಿ ಕರಗುತ್ತದೆ. ನಿಮ್ಮ ಕೆಲಸದವರು ಅನಿರೀಕ್ಷಿತವಾಗಿ ತಮ್ಮ ತಳಕೀಳುವರು. ನಿಮ್ಮ ದಾಂಪತ್ಯದ ಕಲಹ ಹೆಂಡತಿಗೆ ತವರುಮನೆ ವಾಸಕ್ಕೆ ದೂಡುತ್ತದೆ. ವಿವಾಹ ಪ್ರಸ್ತಾಪಕ್ಕೆ ಅನುಕೂಲವಾಗಲಿದೆ. ಮೋಜಿಗಾಗಿ ಖರ್ಚು ಹೆಚ್ಚಾಗಲಿದೆ. ಕಾಲು ನೋವು ಕಾಡುತ್ತದೆ. ಶುಭದಿನ 27. ನವಧಾನ್ಯಗಳನ್ನು ಈಶ್ವರ ಗುಡಿಗೆ ನೀಡಿರಿ.




ಸರ್ವ ದೃಷ್ಟಿಯಿಂದಲೂ ಉತ್ತಮವಾದ ದಿನಗಳು ಈ ವಾರ ನಿಮಗೆ ಸಿಗುತ್ತವೆ. ದೇವಾಲಯದ ಮುಖ್ಯಸ್ಥರಿಗೆ ಸರಕಾರಿ ಅನುದಾನ ಸಿಗುತ್ತದೆ. ಗಂಡ ಯಾ ಹೆಂಡತಿಗೆ ಉತ್ಕರ್ಷ ಉಂಟಾಗುತ್ತದೆ. ಸಾಮಾಜಿಕ ಮನ್ನಣೆ ಪರದೇಶ ಗಮನ ಯೋಗ. ವ್ಯಕ್ತಿತ್ವದ ಛಾಪು ಒತ್ತುವಿರಿ. ಹೊಸ ಮಿತ್ರರಿಂದ ಲಾಭ. ವಾರದ ಕೊನೆಯ ದಿನ ನಷ್ಟ. ಶುಭದಿನ 24. ಬ್ರಹ್ಮೋತ್ತರ ಖಂಡ ಪಠಿಸಿರಿ.




ಸಾಡೇಸಾತಿ ಇನ್ನೂ ಐದು ತಿಂಗಳ ಕಾಲ ಬಾಕಿ ಉಳಿಯಲಿದೆ. ಸ್ಥಿರ ನೌಕರಿ ಪ್ರಾಪ್ತಿ. ಉದ್ಯೋಗದ ಕಾರಣಕ್ಕೆ ಪ್ರವಾಸ ಮಾಡಬೇಕಾಗುತ್ತದೆ. ಉನ್ನತ ಅಧಿಕಾರ ಪ್ರಾಪ್ತಿ. ರಾಜಕಾರಣಿಗಳಿಗೆ ಅತ್ಯಂತ ಶುಭ. ಬಹುದಿನದ ಪರಿಶ್ರಮಕ್ಕೆ ಪ್ರತಿಫಲ. ನವ ಜೀವನದಲ್ಲಿ ಕಾಲಿಡುವ ತರುಣರಿಗೆ ಶುಭೋದಯ. ವಾರಾಂತ್ಯದಲ್ಲಿ ನೌಕರರಿಗೆ ಯಶಸ್ಸು. ಶುಭದಿನ 27. ಸುದರ್ಶನ ಜಪ 1200 ಮಾಡಿರಿ.




ವಿದೇಶಗಳಿಂದಲೂ ನಿಮ್ಮ ಕೆಲಸಕ್ಕೆ ಮನ್ನಣೆ ಸಿಗಲಿದೆ. ನಿಮ್ಮ ಎಲ್ಲ ಪ್ರಯತ್ನ ಯಶ ಕೊಡುವುದು. ಹಣ ಖರ್ಚಾದರೂ ಸಾಮಾಜಿಕ ಮನ್ನಣೆ ಲಭಿಸುವುದು. ಬಹು ದಿನಗಳ ನಂತರ ಮಕ್ಕಳ ಬಗ್ಗೆ ಸುವಾರ್ತೆ ಕೇಳುವಿರಿ. ಉತ್ಸವ ಪ್ರದರ್ಶನಗಳಲ್ಲಿ ಭಾಗವಹಿಸುವಿರಿ. ದೇವತಾ ಪೂಜೆ ಪುನಸ್ಕಾರದಲ್ಲಿ ಭಾಗವಹಿಸುವಿರಿ. ಉತ್ತಮ ಆರೋಗ್ಯ ನಿಮಗಿರುತ್ತದೆ. ಶುಭದಿನ 28. ಕುಲದೇವತಾ ಪ್ರಾರ್ಥನೆ ಮಾಡಿರಿ.




ಏಕಾದಶ ಗುರುವಿನ ಅನುಗ್ರಹ ಒಂದು ಬಿಟ್ಟರೆ ಉಳಿದ ಆಕಾಶ ಕಾಯಗಳೆಲ್ಲ ಪ್ರತಿಕೂಲವಾಗಿರುವವು. ಬಂಧುಗಳು ಶತ್ರುಗಳೊಡನೆ ಸೇರುವರು. ಅಷ್ಟಮದ ರವಿಕುಜರಿಂದ ಅಗ್ನಿ ಭಯವಿದೆ. ಮೂಲವ್ಯಾಧಿ ಕಾಣಿಸಲಿದೆ. ಅಧಿಕಾರಿಗಳಿಗೆ ಅಧಿಕಾರ ಚ್ಯುತಿಯ ಸಂದರ್ಭ. ಎಚ್ಚರದಿಂದ ವ್ಯವಹರಿಸಬೇಕಾಗುತ್ತದೆ. ಶುಭದಿನ 26. ನವಗ್ರಹ ಶಾಂತಿ ಮಾಡಿಸಿ.




ಹೊಸಮನೆಯ ಪ್ರವೇಶಕ್ಕೆ ಸಿದ್ಧತೆಯಾಗುವುದು. ಉದ್ಯೋಗಸ್ಥ ಮಹಿಳೆಯರಿಗೆ ಉತ್ತಮ. ಕೆಲಸದಲ್ಲಿ ಪದೋನ್ನತಿಯಾಗುವುದು. ಇಚ್ಛಿತ ಸ್ಥಳಕ್ಕೆ ವರ್ಗಾವಣೆ ಆಗುವುದು. ಆರ್ಥಿಕವಾಗಿ ನಿರೀಕ್ಷಿತ ಲಾಭ. ಕ್ರಯ ವಿಕ್ರಯಕ್ಕೆ ಸಕಾಲ. ಮಕ್ಕಳ ಭಾಗ್ಯೋದಯ ಸಂಬಂಧ ಯಾರದಾದರೂ ಮದುವೆಯ ಪ್ರಯತ್ನದಲ್ಲಿ ಯಶಸ್ಸು. ಮಹತ್ವದ ಕೆಲಸದಲ್ಲಿ ಮುನ್ನಡೆ. ಶುಭದಿನ 28. ಶಂಕರಾಚಾರ್ಯರ ಸೌಂದರ್ಯ ಲಹರಿ ಪಠಿಸಿರಿ.




ನವ ವಿವಾಹಿತರಿಗೆ ಸಂತತಿ ಪ್ರಾಪ್ತಿಯ ಲಕ್ಷಣ ಗೋಚರಿಸಲಿದೆ. ಅನೇಕ ದಿನಗಳ ಕಾಲ ನಿಮ್ಮನ್ನು ಕಾಡಿದ ನಿರುದ್ಯೋಗ ಸಮಸ್ಯೆ ಬಗೆಹರಿಯುವುದು. ಹೊಟ್ಟೆಕಿಚ್ಚಿನ ಜನರಿಂದ ಪರೋಕ್ಷ ತೊಂದರೆ ಇದೆ. ಎಲ್ಲ ಕೆಲಸಗಳಿಂದ ಧನಲಾಭ. ಷೇರು ವ್ಯವಹಾರದಾರರಿಗೆ ಬಂಡವಾಳದ ಹಿಡಿತವಿರಲಿ. ಶುಭದಿನ 29. ಗಣಪತಿಗೆ ದೂರ್ವಾರ್ಚನೆ ಮಾಡಿರಿ.